ಕೈಹಿಡಿದು ದಾಟಿಸಿದ. ಆಚೆ ತಲುಪುತ್ತಿದ್ದಂತೆ ಕೈಬಿಡಿಸಿಕೊಂಡು 'ಐ ಕ್ಯಾನ್ ವಾಕ್ ಈಸೀಲಿ' ಅನ್ನುತ್ತಾ ಹೊರಟರು. ಅವರ ಕೈಯಲ್ಲಿದ್ದ ಚೆಕ್ ಕಂಡು 'ಡ್ರಾಪ್‌ಬಾಕ್ಸ್‌ನಲ್ಲಿ ಹಾಕ್ಬೇಕಾ... ಕೊಡಿ ಹಾಕ್ತೀರ್ನಿ' ಅಂದದ್ದಕ್ಕೆ 'ನೋ ನೋ, ನಾನು ಹಾಕತೀನಿ. ಅಯಾಂ ಫಿಟ್ ಐಸೇ...' ಅಂತ ಮುಂದುವರಿದರು.

ಬೆಳಿಗ್ಗೆ ಬೆಳಿಗ್ಗೆ ದಬದಬ ಬಾಗಿಲು ಬಡಿದ ಸದ್ದಿಗೆ ಮುಖಕ್ಕೆ ಶೇವಿಂಗ್ ಜೆಲ್ ಹಚ್ಚಿಕೊಂಡೇ ಬಾಗಿಲು ತೆರೆದ ಡಿಸೋಜಾರಿಗೆ ಆತಂಕದಲ್ಲಿ ನಿಂತಿದ್ದ ದೇವಕಿಮಾಮಿ ಕಂಡರು. ಎರಡು ನಿಮಿಷದಲ್ಲಿ ಇಡೀ ಅಪಾರ್ಟ್‌ಮೆಂಟಿಗೆ ಸುದ್ದಿ ಸಿಕ್ಕಿತು. ಚಂದ್ರಕಾಂತ ಪಾಟೀಲ ತಕ್ಷಣ ಕಾರು ಹೊರತೆಗೆದರು. 'ಈ ಸ್ಥಿತೀಲಿ ಕಾರಲ್ಲಿ ಬೇಡಾರಿ, ಈಗ ಟ್ರಾಫಿಕ್ಕಿರಲ್ಲ, ಆಂಬುಲೆನ್ಸು ಹತ್ತು ನಿಮಿಷದಲ್ಲಿ ಬರುತ್ತೆ...' ಮಹದೇವ ಮೊಬೈಲಿನಲ್ಲಿ ನಂಬರು ಒತ್ತತೊಡಗಿದರು. ಆಂಬುಲೆನ್ಸಿನಲ್ಲಿ ಮೂವರು, ಹಿಂದೆ ಕಾರಿನಲ್ಲಿ ನಾಲ್ಕು ಜನ. ಅಡ್ಮಿಟ್ ಮಾಡಿಕೊಂಡ ಡಾಕ್ಟರು ಒಂದು ಇಂಜೆಕ್ಷನ್ ಕೊಟ್ಟು ಇಸಿಜಿ ಮುಂತಾದ ಪರೀಕ್ಷೆಗಳಿಗೆ ಕಳಿಸಿದರು. ಅಲ್ಲಿ ಇಬ್ಬರು ಉಳಿದುಕೊಂಡು, ಏನೇ ಇದ್ರೂ ದಾಕ್ಷಿಣ್ಯವಿಲ್ದೇ ತಿಳಿಸಿ ಅಂತ ಹೇಳಿ ಉಳಿದವರು ಆಫೀಸಿಗೆ ಹೋದರು. ಸಾಯಂಕಾಲ ಅಪಾರ್ಟ್‌ಮೆಂಟಿಂದ ಹತ್ತು ಜನ ಬಂದರು. ಬೀಪಿ ಶುಗರಿದೆ,

